ಆದರೆ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ಯಾವುದೇ ವಿದ್ಯಾರ್ಥಿನಿಲಯಗಳು ಇರುವುದಿಲ್ಲ

ಆ) 502

ರಾಮನಗರದಲ್ಲಿ ಸುಸಜ್ಜಿತ ಬಸ್‌ನಿಲ್ದಾಣವನ್ನು ಪ್ರಾರಂಭಿಸುವ ಬಗ್ಗೆ

559 (890) ಶ್ರೀ ರಾಜು ಕೆ. (ರಾಮನಗರ) (ಮಾನ್ಯ ಸಾರಿಗೆ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) :– ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

ಅ) ರಾಮನಗರದಲ್ಲಿ ಸುಸಜ್ಜಿತ ಬಸ್ ನಿಲ್ದಾಣವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಪ್ರಸ್ತುತವಿರುವ ನಿಲ್ದಾಣವನ್ನೇ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಅಥವಾ ಹೊಸ ನಿಲ್ದಾಣಕ್ಕಾಗಿ ಸ್ಥಳ ಗುರುತಿಸಲಾಗಿದೆಯೇ;

ಇ) ಈ ಬಗ್ಗೆ ನಗರದ ಯಾವ ಭಾಗದಲ್ಲಿ ಸ್ಥಳ ಗುರುತಿಸಲಾಗಿದೆ.

ಈ) ಸುಸಜ್ಜಿತ ಬಸ್‌ನಿಲ್ದಾಣಕ್ಕಾಗಿ ಸರ್ಕಾರ ಅಂದಾಜು ಅನುದಾನವನ್ನು ನಿಗದಿ ಪಡಿಸಿದೆಯೇ;

ಊ) ಹಾಗಿದ್ದಲ್ಲಿ, ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ; ವಿವರಗಳನ್ನು ನೀಡುವುದು;

ಋ) ಕಾಮಗಾರಿಯನ್ನು ಎಷ್ಟು ದಿನದಲ್ಲಿ ಪ್ರಾರಂಭಿಸ ಲಾಗುವುದು?

ಶ್ರೀ ಆರ್. ಅಶೋಕ್ ಮಾನ್ಯ ಸಾರಿಗೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ಅ) ಹೌದು

ಆ) ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ. ನೂತನ ಬಸ್ ನಿಲ್ದಾಣ ನಿರ್ಮಿಸಲು ಸ್ಥಳ ಗುರುತಿಸಲಾಗಿದೆ.

ಇ) ರಾಮನಗರದ ಬೋಳಪ್ಪನಹಳ್ಳಿಯ ನಿವೇಶನ ಸಂಖ್ಯೆ: 94ನ್ನು 204 ರಿಂದ 112ರ ಸರ್ವೆ ಸಂಖ್ಯೆಯಲ್ಲಿರುವ 10 ಎಕರೆ 04 ಗುಂಟೆ ಜಾಗವನ್ನು ಗುರುತಿಸಲಾಗಿದೆ.

ಈ) ಈ ನಿವೇಶನದ ಬಗ್ಗೆ ಭೂಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ನ್ಯಾಯಾಲಯದಲ್ಲಿ ದಾವೆ ಬಾಕಿ ಇರುತ್ತದೆ. ಸದರಿ ದಾವೆಯು ಇತ್ಯರ್ಥವಾಗಿ ನಿವೇಶನವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಶಕ್ಕೆ ಬಂದ ನಂತರ ಸಂಚಾರದ ಅವಶ್ಯಕತೆಗೆ ಅನುಗುಣವಾಗಿ ಹಾಗೂ ನಿಗಮದ ಆರ್ಥಿಕ ಸಂಪನ್ಮೂಲ ಲಭ್ಯತೆಗೆ ಅನುಗುಣವಾಗಿ ವಿವರವಾದ ಯೋಜನಾ ವರದಿಗಳನ್ನು ತಯಾರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.